ಹೂಡಿದೆ. ಒಂಟಿಬಡಕನಾಗಿದ್ದು ಮೆಸ್‌ಗಳಲ್ಲಿ ಉಣ್ಣುತ್ತ, ಸಿನಿಮಾ ಥಿಯೇಟರುಗಳಲ್ಲಿ ರಾತ್ರಿಗಳನ್ನು ಕಳೆಯುತ್ತಲಿದ್ದವನು, ಈಗ ಹೊಸ ಜೀವನಸಂಗಾತಿಯ ಜತೆ ಗೃಹಸ್ಥನಾಗಿ ಮರ್ಯಾದೆಯಿಂದ ಜೀವಿಸುವುದನ್ನು ರೂಢಿಸಿಕೊಳ್ಳಬೇಕಿತ್ತು. ಹೆಂಡತಿಯಾದವಳು, ನನ್ನನ್ನೂ 'ಎಸ್ಸೆಸ್ಸೆಲ್ಸಿ'ಯಲ್ಲಿ ಐದು ಪಾರ್ಟುಗಳನ್ನು ಬಾಕಿಯುಳಿಸಿಕೊಂಡು ಜತೆಯಿದ್ದ ಪ್ರಿಯ ಸೋದರನನ್ನೂ ದುರಸ್ತಿ ಮಾಡಲು ತವರಿನಿಂದಲೇ ಟೂಲ್‌ಬಾಕ್ಸನ್ನು ತಂದಿದ್ದಳು. ಅದರಿಂದ ಕೆಲವೇ ದಿನಗಳಲ್ಲಿ ನಮ್ಮನ್ನು ನಾಗರಿಕರನ್ನಾಗಿ ಮಾಡಿದಳು. ಅವಳ ಈ ಕಾರ್ಯವು ಪಾರ್ಕಿನ ಚತುರ ಮಾಲಿಯು ಸ್ವೇಚ್ಛೆಯಿಂದ ಬೆಳೆದ ಗಿಡದ ರೆಕ್ಕೆಗಳನ್ನು ನೀಟಾಗಿ ಕತ್ತರಿಸಿ ಪ್ರೇಕ್ಷಣೀಯಗೊಳಿಸುವಂತಿತ್ತು. ಮಾತ್ರವಲ್ಲ, ಆಕೆ ಮನೆಯ ಸುತ್ತ ಅಲಂಕಾರದ ಗಿಡ ನೆಟ್ಟು, ಬಳ್ಳಿ ಹಬ್ಬಿಸಿ ಹೂತಳೆಸಿದಳು. ಮನೆಯ ಮುಂದೆ ನಾನೂ ತಮ್ಮನೂ ಸೇರಿ ಹೊಂಗೆಸಸಿ ನೆಟ್ಟೆವು. ಐದು ವರ್ಷಗಳಲ್ಲಿ ಮನೆ ಬೀದಿಯಲ್ಲಿ ಸುಳಿಯುವ ಯಾರೂ ಕೊರಳು ಕೊಂಕಿಸಿ ನೋಡುವಷ್ಟು ಚೆಲುವನ್ನು ಗಳಿಸಿಕೊಂಡಿತು. ಬೀದಿಗರು ಓಡಾಡುವಾಗ ನಮ್ಮ ಮನೆಯತ್ತ ನೋಡುತ್ತಾರೆಯೇ ಇಲ್ಲವೇ ಎಂದು ನಾವು ಆಗಾಗ್ಗೆ ಕಿಟಕಿ ಸಂದಿನಿಂದ ಪರೀಕ್ಷಿಸುತ್ತಿದ್ದೆವು.

ಬಾಲ್ಯದಲ್ಲಿ ನಾನು ನಿವಾಸಿಸಿದ ಮನೆಗಳು ಊರಾಚೆಯಿದ್ದವು. ಕೊಳಚೆ ಪ್ರದೇಶದಲ್ಲಿದ್ದವು. ಸರ್ವ ಧರ್ಮಗಳಿಗೆ ಸೇರಿದ ಪ್ರಜೆಗಳು, ಸಂಸಾರ ಸಾಗರದಲ್ಲಿ ಈಜಿ ಮುಳುಗಿ ತೇಲಿ, ಇಹಲೋಕ ಯಾತ್ರೆಯನ್ನು ಮುಗಿಸಿ ತಣ್ಣಗೆ ನಿದ್ರಿಸಲು ಆಗಮಿಸುವ ಶಾಂತಿವನದಲ್ಲಿದ್ದವು. ಅಲ್ಲಿನ ನಿವಾಸಿಗಳೊ ಕೂಲಿನಾಲಿ ಮಾಡಿ ಉಣ್ಣುವವರಾಗಿದ್ದರು. ಬೆಳಕು ಹರಿದರೆ ಹೊಡೆದಾಟ. ಸಂಜೆಯಾದರೆ ಸಂಭ್ರಮ. ಜಗಳಕ್ಕಾಗಲಿ ಪ್ರೀತಿಗಾಗಲಿ ಕಾರಣವೇ ಬೇಕಿರಲಿಲ್ಲ. ಪ್ರತಿ ಮನೆಯ ಜಗಳ ಎಲ್ಲರ ಮನೆಗೆ ನೇರಪ್ರಸಾರದಲ್ಲಿ ಕೇಳಿಸುವ ಮುಕ್ತವ್ಯವಸ್ಥೆಯಿತ್ತು. ಜೀವಂತಿಕೆಯಿಂದ ಝುಗಝುಗಿಸುವ ಆ ಕೇರಿಗಳಿಗೆ ಹೋಲಿಸಿದರೆ, ಈಗಿನದು ರೋಚಕ ಚಟುವಟಿಕೆಗಳೇ ಇಲ್ಲದ, ಗುಮಾಸ್ತರು, ಶಿಕ್ಷಕರು, ಎಂಜಿನಿಯರು, ಡಾಕ್ಟರುಗಳು ಸಭ್ಯತೆಯ ಸೆರೆಮನೆಗಳಲ್ಲಿ ನೆಲೆಸಿದ್ದ, ನಿಶ್ಶಬ್ದ ನೀರವ ಬೀದಿ. ಇಲ್ಲಿಯೇ ನಮ್ಮ ಮಕ್ಕಳ ಜನ್ಮವೂ ಆಯಿತು. ನಾನು ಸೋದರ ಹೆಂಡತಿ ಮಕ್ಕಳ ಹಿತಬಂಧನದಲ್ಲಿ ಬದುಕು ನಡೆಸತೊಡಗಿದೆ.

ಆದರೆ ಈ ಸುಖ ಬಹುಕಾಲ ಬಾಳಲಿಲ್ಲ. ಹಂಪಿ ಸೀಮೆಯಲ್ಲಿ ಹೊಸ ನೌಕರಿ ಸಿಕ್ಕವನಾಗಿ ಅಲ್ಲಿಂದ ತಳಕೀಳಬೇಕಾಯಿತು. ಶಕುಂತಲೆಯನ್ನು ಬೀಳ್ಕೊಡುವಾಗ ಕಣ್ವಾಶ್ರಮದ ಚರಾಚರಗಳು ಪ್ರಲಾಪಿಸಿದಂತೆ, ಗಿಡಗಳು ನಮ್ಮನಗಲಿ ಹೋಗುವಿರಾ ಎಂದು ಮರುಗುವಂತೆ ಕಂಡವು. 'ಈ ಊರು, ಈ ಮನೆ, ಇಷ್ಟು ಸಂಬಳ ಸಾಕಲ್ಲವೇ?' ಎಂದು ಹೆಂಡತಿ ಕಾಂತಾಸಂಹಿತ ಧಾಟಿಯಲ್ಲಿ ಹತ್ತಾರು ಸಲ ಹೇಳಿದಳು. ನಾನು ಕೇಳುವ ಸಹೃದಯ ಪರಿಸ್ಥಿತಿಯಲ್ಲಿರಲಿಲ್ಲ. ಬಿಟ್ಟಿದ್ದ ಬೇರನ್ನು ಬಲಾತ್ಕಾರವಾಗಿ ಕಿತ್ತುಕೊಂಡು, ಎಳಗೂಸುಗಳನ್ನು ಎದೆಗವಚಿಕೊಂಡು, ಬಿಸಿಲೆ ಬೆಳದಿಂಗಳಾಗಿರುವ ಬಳ್ಳಾರಿ ಸೀಮೆಗೆ ಬಂದು ಬಿದ್ದೆವು. ಮತ್ತೊಮ್ಮೆ ಬಾಡಿಗೆ ಮನೆಗಳ ಬೇಟೆ ಶುರುವಾಯಿತು. ಮನೆ ಹಿಡಿಯಲು ನಮ್ಮ ಧರ್ಮ ಮತ್ತು ಆಹಾರ ಅಡ್ಡಬರುತ್ತಿದ್ದವು. ಆದರೂ ಮನೆ ಸಿಗುವುದು ಕಷ್ಟವಾಗಲಿಲ್ಲ. ಕಷ್ಟವಿದ್ದುದು ಕೈಕಚ್ಚುತ್ತಿದ್ದ ಬಾಡಿಗೆ ದರದಲ್ಲಿ. ಹೃದಯಹೀನ ಮಾಲೀಕನು ಬಾಡಿಗೆ ಹೆಚ್ಚಿಸುವ ಗಳಿಗೆ ಬಂದಾಗ ಕೃಷ್ಣಾರ್ಜುನ ಕಾಳಗ ಏರ್ಪಡುತ್ತಿತ್ತು. ಒಂದು ಸಲ ಹಗ್ಗಜಗ್ಗಾಟ ತುಸು ದೀರ್ಘವಾಗಲು, ಮಾತುಸೋತ ಮಾಲೀಕ, 'ನಿಮಗೆ ಜಾಸ್ತಿ ಬಾಡಿಗೆ ಕೊಡೋದು ಅಷ್ಟು ಕಷ್ಟವಾದರೆ, ನಾಳೇನೇ ಖಾಲಿಮಾಡಿ ಬೀಗದಕೈ ಹ್ಯಾಂಡ್‌ಓವರ್ ಮಾಡ್ರಿ' ಎಂದುಬಿಟ್ಟನು. ಚೌಕಾಸಿ ನಾಟಕಕ್ಕೆ ಮೂಕಪ್ರೇಕ್ಷಕಳಾಗಿ ಗಂಡನ